ಶ್ರೀ ಎಂ.ಪಿ. ವೆಂಕಟೇಶ್(ಹೆಗ್ಗಡದೇವನಕೋಟೆ): ಮಾನ್ಯ ಉಪಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರೆ, ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ನೀರು ಬಿಡುವುದಕ್ಕೆ ಆದೇಶ ಕೊಟ್ಟರೂ ಕೂಡ ನೀರನ್ನು ಬಿಡುವುದಕ್ಕೆ ರೈತರು ತಯಾರಿಲ್ಲ. ರೈತರು ಒಂದು ಹನಿ ನೀರನ್ನೂ ಬಿಡುವುದಿಲ್ಲ. ಅದು ವಾಟಾಳ್ ನಾಗರಾಜ್‌ರವರಿಗೂ ಗೊತ್ತು. ಮೈಸೂರು ಜಿಲ್ಲೆ, ಹೆಗ್ಗಡ ದೇವನಕೋಟೆ ಜನ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಆದೇಶ ಕೊಟ್ಟರೂ ನೀರು ಬಿಡುವುದಕ್ಕೆ ತಯಾರಿಲ್ಲ. ಆ ರೀತಿಯ ಭ್ರಮೆ ಬೇಡ. ನೀರು ಬಿಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ವಾಟಾಳ್‌ರವರು ಇನ್ನೊಂದು ಮಾತನ್ನು ಹೇಳಿದರು: ನನಗೆ ನೆನಪು ಹೋಯಿತು. ಏನೋ ಪ್ರಧಾನಮಂತ್ರಿಗಳವರಿಗೆ ಮಾನ್ಯ ಮುಖ್ಯಮಂತ್ರಿಗಳವರು ಟೆಲಿಫೋನ್‌ನಲ್ಲಿ ಮಾತನಾಡಿದ್ದಾರೆ. ಅದು ಏನು ಮಾತನಾಡಿದ್ದಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕು. ಅದಕ್ಕಾಗಿ ಅದರ ಬಗ್ಗೆ ಹೇಳಬೇಕು ಎಂದರು. ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ನಾನೇನು ತಿಳಿದುಕೊಂಡಿದ್ದೆ ಎಂದರೆ ಮುಖ್ಯಮಂತ್ರಿಗಳು ಟೆಲಿಫೋನ್‌ನಲ್ಲಿ ಮಾತನಾಡಿದ ಮೇಲೆ ತಕ್ಷಣ ವಾಟಾಳ್‌ನಾಗರಾಜ್‌ರವರಿಗೆ ತಿಳಿಸಿರಬೇಕು ಎಂದು ನನ್ನ ಭಾವನೆ ಇತ್ತು. ಏಕೆಂದರೆ ಯಾವಾಗಲೂ ಕೂಡ ಇಂಥ ಮಾತುಕತೆ ಆದರೆ ಮೊದಲನೆಯ ಟೆಲಿಫೋನ್ ಇವರಿಂದ ಅವರಿಗೆ ಹೋಗುವುದು, ಅವರಿಂದ ಇವರಿಗೆ ಬರುವುದು ಇದೆ. ಬಹುಶಃ ಅವರಿಗೆ ಗೊತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್: ಇದು ಒಳ್ಳೆಯ ಮಾತಿನ ದೊಡ್ಡ ಪಿತೂರಿ ಇದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಇವೊತ್ತು ಸಾಯಂಕಾಲ ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್‌ನಿಂದ ಬರುತ್ತಾರೆ. ಅವರು ಬಂದಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಲಿ.

5. ಪ್ರಕಟಣೆ

ವಿಷಯ: ಮಾನ್ಯ ಕಂದಾಯ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನಕೂಟದ ಏರ್ಪಾಡು.

ಉಪಾಧ್ಯಕ್ಷರು: ಈಗ ಇಲ್ಲೊಂದು ಪ್ರಕಟಣೆ ಇದೆ. ಮಾನ್ಯ ಎಂ.ಪಿ. ಪ್ರಕಾಶ್, ಕಂದಾಯ ಸಚಿವರು, ಈ ದಿನ ಮಧ್ಯಾಹ್ನ 1.30 ಕ್ಕೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿರುವ ಭೋಜನ ಕೂಟದಲ್ಲಿ ಭಾಗವಹಿಸಲು ತಮ್ಮನ್ನು ಆಹ್ವಾನಿಸಲಾಗಿದೆ. ತಾವುಗಳೆಲ್ಲರೂ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.07ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)